# ರಾಮ ರಾಮೆನ್ನಿರೋ ನರಜನ್ಮ ಸ್ಥಿರವಲ್ಲ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** Lyrics mentioned without highlights are as per Ref. 2. Lyrics in Ref. 1 are same as in Ref. 2 except few wordings, which are given in grey highlights.
4. **Note:** Singer has followed lyrics as in Ref. 2.

ರಾಗ: ಸೌರಾಷ್ಟ್ರ ತಾಳ: ಅಟ್ಟ

ರಾಮ ರಾಮೆನ್ನಿರೋ ನರಜನ್ಮ ಸ್ಥಿರವಲ್ಲ ರಾಮ ರಾಮ || ಪ ||
ಇಂಥ ಕೋಮಲಾಂಗನ ನಾಮ ಆ ವೇಳೆಗೊದಗದು ರಾಮ ರಾಮ || ಅಪ ||

(ಯಾರಿಗೆ ಯಾರಿಲ್ಲ) (ಆರಿಗೆ ಆರಿಲ್ಲ) ತನಗೆ ತಾನಲ್ಲದೆ ರಾಮ ರಾಮ ತನ್ನ
ನಾರಿಯು ಮೊದಲಾದವರು ಸರಿ ಬಾರರು ರಾಮ ರಾಮ || ೧ ||

ಓರಂತೆ ಸಾಕಿದ ಸುತರು ತನ್ನವರಲ್ಲ ರಾಮ ರಾಮ
ಧಾರುಣಿ ಪಶು ಧಾನ್ಯ ಧನವು ಹಿಂದುಳಿವುವೋ ರಾಮ ರಾಮ || ೨ ||

ಕೆಟ್ಟ ಸಂಸಾರದಿ ಎಷ್ಟಕ್ಕು ಸುಖವಿಲ್ಲ ರಾಮ ರಾಮ
ಸೃಷ್ಟಿಯೊಳ್ ಪುರಂದರ ವಿಠಲನ ಮರೆಯದೆ ರಾಮ ರಾಮ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಆರಿಗೆ ಆರಿಲ್ಲ...** – 'ಉದ್ಧರೇದಾತ್ಮನಾತ್ಮಾನಂ' ಎಂಬ ಸ್ಮೃತಿ ವಾಕ್ಯದ ಛಾಯೆ.

**ಓರಂತೆ ಸಾಕಿದ...** – 'ಓರ್ ಅಂತೆ,' ಒಬ್ಬನೇ ಮಗನೆಂಬಂತೆ ಪ್ರೀತಿಯಿಂದ ಸಾಕಿದ.

**ಧಾರುಣಿ** – ಭೂಮಿ.

**Classification:** Keerthane
**Ankita:** purandara vittala
**Location:** NA
**Category:** Rama Stuti, Virakti
**Sub-Category:** rama, nara, janma, maga, bhumi, dhAnya, rokka, samsara, sukha,
**Pravachana:** NA
**Explanation:** NA